ಜಿಲ್ಲಾ ಪಂಚಾಯತ ಧಾರವಾಡ

# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಧಾರವಾಡ


ಕೆ.ಸಿ.ಪಾರ್ಕ, ಹಳಿಯಾಳ ರೋಡ ಧಾರವಾಡ-580008

E- mail : dhodharwad@gmail.com ದೂರವಾಣಿ: 0836–2447483


ಕ್ರಸಂ: ಜಿಆಕುಕಅಕಧಾ/ಸಿಬ್ಬಂದಿ-2/ವಿವ/ / 2026-27 ದಿನಾಂಕ : 24.07.2026

## ಪ್ರಕಟಣೆ

ಧಾರವಾಡ ಜಿಲ್ಲೆಯ ಆರೋಗ್ಯ ಸಂಸ್ಥೆಗಳಲ್ಲಿ ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ 12 ಶುಶೂಷಾಧಿಕಾರಿಗಳು, 01 ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ, 01 ಫಾರ್ಮಾಸಿ ಅಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಅಥವಾ ಸರ್ಕಾರದಿಂದ ಸದರ ಹುದ್ದೆ ಭರ್ತಿ ಆಗುವವರಗೆ ಅಥವಾ ವರ್ಗಾವಣೆಯಿಂದ ಸದರ ಹುದ್ದೆ ಭರ್ತಿ ಆಗುವವರೆಗೆ ಈ ಮೂರರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಆಸಕ್ತ ಅಭ್ಯರ್ಥಿಗಳು Online ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದ್ದು ದಿನಾಂಕ: 28/07/2026 ರಿಂದ ದಿನಾಂಕ 05/08/2026 ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕದ ನಂತರ ಸಲ್ಲಿಸಿದ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. ದಿನಾಂಕ: 10/08/2026 ರಿಂದ 12/08/2026 ರವರೆಗೆ Online ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಎಲ್ಲ ಮೂಲದಾಖಲಾತಿಗಳನ್ನು ಪರೀಶಿಲಿಸಲಾಗುವದು. ಅರ್ಜಿ ಸಲ್ಲಿಸಿದ ಎಲ್ಲ ಅಭ್ಯರ್ಥಿಗಳು ಕಡ್ಡಾಯವಾಗಿ ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕು. ದಾಖಲಾತಿ ಪರಿಶೀಲನೆಗೆ ಹಾಜರಾದ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆಗೆ ಪರೀಗಣಿಸಲಾಗುವದು.ಸದರ ನೇಮಕಾತಿಯನ್ನು ರೋಷ್ಟರ ಕಮ್ ಮೆರಿಟ್ ಆಧಾರದ ಮೇಲೆ ಮಾಡಲಾಗುವದು. ಸದರ ನೇಮಕಾತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಿಂದ ಕಚೇರಿಯ ಸಮಯದಲ್ಲಿ ಪಡೆಯಬಹುದು.

**ಭರ್ತಿ ಮಾಡಬೇಕಾದ ಹುದ್ದೆಗಳ ಹಾಗೂ ವಿದ್ಯಾರ್ಹತೆ ವಿವರ:**

1. **ಶುಶ್ರೂಷಾಧಿಕಾರಿ – 12 ಹುದ್ದೆಗಳು**

   **ವಿದ್ಯಾರ್ಹತೆ** : Diploma Nursing / BSc Nursing ಪದವಿಯನ್ನು ಹೊಂದಿರಬೇಕು. ಹಾಗೂ ಕರ್ನಾಟಕ ನರ್ಸಿಂಗ್ ಕೌನ್ಸಲ ನೋಂದಣಿ ಪ್ರಮಾಣ ಪತ್ರ ಹಾಗೂ Midwifery ಪ್ರಮಾಣ ಪತ್ರ ಹೊಂದಿರಬೇಕು. (ವಿದ್ಯಾರ್ಹತೆಗೆ ಸಂಬಂಧಪಟ್ಟ ಎಲ್ಲ ದಾಖಲಾತಿಗಳನ್ನು Online ಮುಖಾಂತರ ಸಲ್ಲಿಸುವದು.)

   **ವಯಸ್ಸು**: ಅಭ್ಯರ್ಥಿಯ ವಯಸ್ಸು 45 ವರ್ಷಕ್ಕಿಂತ ಒಳಗಿರತಕ್ಕದ್ದು.

2. **ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ –01 ಹುದ್ದೆ**

   **ವಿದ್ಯಾರ್ಹತೆ**: Diploma In Laboratory Technician ಹಾಗೂ ಕರ್ನಾಟಕ ಪ್ಯಾರಾ ಮೆಡಿಕಲ್ ಬೋರ್ಡಿನಿಂದ ಮಾನ್ಯತೆ ಪಡೆದ ನೋಂದಣಿ ಪ್ರಮಾಣ ಪತ್ರ ಹೊಂದಿರಬೇಕು. (ವಿದ್ಯಾರ್ಹತೆಗೆ ಸಂಬಂಧಪಟ್ಟ ಎಲ್ಲ ದಾಖಲಾತಿಗಳನ್ನು Online ಮುಖಾಂತರ ಸಲ್ಲಿಸುವದು.)

   **ವಯಸ್ಸು**: ಅಭ್ಯರ್ಥಿಯ ವಯಸ್ಸು 45 ವರ್ಷಕ್ಕಿಂತ ಒಳಗಿರತಕ್ಕದ್ದು.

3. **ಫಾರ್ಮಾಸಿ ಅಧಿಕಾರಿ : 01 ಹುದ್ದೆ**

   **ವಿದ್ಯಾರ್ಹತೆ**: Diploma in Pharmacy ಹಾಗೂ ಕರ್ನಾಟಕ ಫಾರ್ಮಸಿ ಕೌನ್ಸಿಲ್‌ನಿಂದ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರಬೇಕು. (ವಿದ್ಯಾರ್ಹತೆಗೆ ಸಂಬಂಧಪಟ್ಟ ಎಲ್ಲ ದಾಖಲಾತಿಗಳನ್ನು Online ಮುಖಾಂತರ ಸಲ್ಲಿಸುವದು.)

   **ವಯಸ್ಸು**: ಅಭ್ಯರ್ಥಿಯ ವಯಸ್ಸು 45 ವರ್ಷಕ್ಕಿಂತ ಒಳಗಿರತಕ್ಕದ್ದು.

**ವಿ.ಸೂ**: ಅಭ್ಯರ್ಥಿಗಳು ಮೇಲೆ ಕೇಳಿರುವ ಎಲ್ಲ ದಾಖಲಾತಿಗಳೊಂದಿಗೆ NIC ಯ ONLINE ಅರ್ಜಿಯಲ್ಲಿ ತಮ್ಮ ವಿವರವನ್ನು ಸಲ್ಲಿಸಲು ತಿಳಿಸಲಾಗಿದ್ದು ಈ ಮೇಲಿನ ವಿದ್ಯಾರ್ಹತೆ ಮತ್ತು ನಿಭಂದನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಹಾಗೂ ಹುದ್ದೆಗಳನ್ನು ಹೆಚ್ಚಿಸುವ ಮತ್ತು ಕಡಿತಗೊಳಿಸುವ ಅಧಿಕಾರವು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ ಹೊಂದಿರುತ್ತದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಅಧಿಕಾರಿಗಳು ಧಾರವಾಡ